
# ಪೆದ್ದಗಂಡನ ಕಟ್ಟಿಕೊಂಡು ಸಾಗಬೇಕು

ರಾಘವಿ ಅರಳಿಗುಂಡಗಿ
ಝೀ ಕನ್ನಡದ 'ಅಣ್ಣಯ್ಯ'ದ ರಾಣಿ



◆ **ಬೆಂಗಳೂರಿಗೆ ಬಂದ ಆರಂಭದ ದಿನಗಳು ಹೇಗಿದ್ದವು?**

ಕಲಬುರಗಿಯಲ್ಲಿ ಹುಟ್ಟಿ ಬೆಳೆದ ನಾನು, ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ದಿಕ್ಕುಕಾಣದೆ ಚಕಿತಳಾಗಿದ್ದೆ. ಇಲ್ಲಿನ ಪರಿಸರದ ಜೊತೆ ಹೊಂದಿಕೊಳ್ಳಲು ಕಷ್ಟಪಡಬೇಕಾಯಿತು. ನಟನೆಯನ್ನು ಮೆಚ್ಚಿ ಬಂದ ನಾನು ಅವಕಾಶಕ್ಕಾಗಿ ಸಾಕಷ್ಟು ಪ್ರಯತ್ನವನ್ನು ಮಾಡಿದೆ. ಮಹಾನಗರದ ಜೀವನ ಗೊತ್ತಿರಲಿಲ್ಲ. ಊರಲ್ಲಿ ಇದ್ದಾಗ ಮನೆ ಮತ್ತು ಕಾಲೇಜಿನ ಆಚೆ ಹೊರಜಗತ್ತನ್ನು ನೋಡದ ಹುಡುಗಿ. ಪ್ರಪಂಚದ ಲೋಕಜ್ಞಾನ ಇರಲಿಲ್ಲ. ಬೆಂಗಳೂರಿನ ಬದುಕಿನಿಂದ ಹೊಸತನದ ಅನುಭವ ಆಯಿತು. ಇಲ್ಲಿನ ಭಾಷೆ ಕೂಡ ನನಗೆ ಅಪರಿಚಿತವೆಂದೆನಿಸಿತು. ಸುತ್ತಮುತ್ತ ಯಾರೂ ಗೊತ್ತಿರಲಿಲ್ಲ, ಅಳುಕು ಕಾಡುತ್ತಿತ್ತು. ಸಹೋದರಿ ಜೊತೆ ಪೀಜಿಯಲ್ಲಿ ನೆಲೆಗೊಂಡೆ. ಆಡಿಷನ್ ಕೊಡುವುದು ನಿತ್ಯದ ಕೆಲಸವಾಗಿತ್ತು. ತುಂಬ ಪ್ರಯತ್ನಗಳು ವಿಫಲವಾದವು. ಆಡಿಷನ್ ನೀಡುತ್ತಾ ಕ್ಯಾಮೆರಾ ಎದುರಿಸುತ್ತಾ ಒಂದು ಧಾರಾವಾಹಿಗೆ ಆಯ್ಕೆಯಾದೆ. ಅಲ್ಲಿಂದ ನನ್ನ ವೃತ್ತಿಬದುಕು ಆರಂಭವಾಯಿತು. ಕಲ್ಯಾಣ ಕರ್ನಾಟಕದ ನಾನು ಬೆಂಗಳೂರಿನ ಕನ್ನಡಕ್ಕೆ ಹೊಂದಿಕೊಳ್ಳಲು ದೀರ್ಘ ಸಮಯ ಹಿಡಿಯಿತು. ಈಗಿನ ಪಾತ್ರ ಮಂಡ್ಯದ ಧಾಟಿಯ ಕನ್ನಡ. ಅದನ್ನೂ ಕಲಿತಿದ್ದೇನೆ ಎನ್ನುವುದು ಖುಷಿಯ ವಿಷಯ.

◆ **ರಾಘವಿ ಜೊತೆ ರಾಣಿಯನ್ನು ಹೋಲಿಕೆ ಮಾಡಿದರೆ ಹೇಗಿರುತ್ತೆ?**

ರಾಘವಿ ತುಂಬ ಮೃದು ಸ್ವಭಾವದವಳು. ಮೌನವನ್ನು ಹೆಚ್ಚು ಪ್ರೀತಿಸುತ್ತಾಳೆ. ರಾಣಿ ಆರಂಭದಲ್ಲಿ ಅರಳು ಹುರಿದಂತೆ ಮಾತನಾಡುತ್ತಿದ್ದಳು. ರಾಣಿ ಮನೆಯ ಎಲ್ಲ ಜವಾಬ್ದಾರಿಯನ್ನು ನಿಭಾಯಿಸುವಷ್ಟು ಶಕ್ತಿವಂತಳು. ಮನೆಯ ಆರ್ಥಿಕ ವ್ಯವಹಾರವನ್ನೆಲ್ಲ ಆಕೆಯೇ ನೋಡಿಕೊಳ್ಳುತ್ತಾಳೆ. ಅಣ್ಣ–ಅಕ್ಕ ತಂಗಿಯರನ್ನು ನೋಡಿಕೊಳ್ಳುವ ದಿಟ್ಟೆ.

◆ **ಪ್ರಾಧ್ಯಾಪಕಿ ಆಗಲಿಲ್ಲ ಎನ್ನುವ ಕೊರಗು ಕಾಡುತ್ತಿದೆಯಾ?**

ಭೌತಶಾಸ್ತ್ರದಲ್ಲಿ ಎಂಎಸ್ಸಿ ಮಾಡಿದೆ. ನಾನು ಓದಿದೆ ಅನ್ನುವುದಕ್ಕಿಂತ ಅಮ್ಮನ ಒತ್ತಾಯಕ್ಕೆ ಓದಿದೆ ಎನ್ನುವುದೇ ಹೆಚ್ಚು ಸರಿ. ಒಂದು ವಿಷಯ ಏನೆಂದರೆ ನಟನೆ ಕಲಿಯದ ನಾನು ಆಡಿಷನ್ ಮೂಲಕವೇ ನಟನೆಯ ಪಟ್ಟುಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಅಲ್ಲಿ ಬೇರೆ ಬೇರೆ ಕಲಾವಿದರು ಹೇಗೆ ನಟಿಸುತ್ತಾರೆ, ಡೈಲಾಗ್‌ಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದೆ. ಅದೂ ನನ್ನ ಕಲಿಕೆಗೆ ಸಹಾಯ ಮಾಡಿದೆ. ಅವರ ಕಲೆಯನ್ನು ಅಳವಡಿಸಿಕೊಂಡು ಬೆಳೆದಿದ್ದೇನೆ. ಅಧ್ಯಾಪನ ಮಾಡುವ ಅವಕಾಶ ಇದ್ದರೂ ಆ ವೃತ್ತಿ ನನಗೆ ಇಷ್ಟ ಆಗಲಿಲ್ಲ. ಒಳ್ಳೆಯ ಕಲಾವಿದೆ ಆಗಬೇಕು ಎನ್ನುವುದು ಚಿಕ್ಕಂದಿನ ಕನಸು. ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ, ಡಾನ್ಸ್‌ಗಳಲ್ಲಿ ನಾನೇ ಮುಂದೆ ಇರುತ್ತಿದ್ದೆ. ಅದೇ ನನಗೆ ನಟನೆಯ ಆಸೆಯನ್ನು ಹುಟ್ಟಿಸಿತು.

◆ **ನಿಮ್ಮ ಪೋಷಕರ ಪ್ರೋತ್ಸಾಹ ಹೇಗಿದೆ?**

ಕಲಾವಿದರ ಜೀವನವೇ ತುಂಬ ಕಷ್ಟ. ಕೆಲವೊಮ್ಮೆ ಕೆಲಸಗಳು ಇಲ್ಲದೆ ಮನೆಯಲ್ಲಿ ಇರಬೇಕಾದ ಸಂದರ್ಭವೂ ಬರುತ್ತದೆ. ನಮ್ಮ ಮನೆಯಲ್ಲಿಯೂ ಇದು ಬೇಡ ಎನ್ನುವ ಅಪಸ್ವರದ ಮಾತನ್ನೇ ಕೇಳುತ್ತೇವೆ. ಸಂಬಂಧಿಗಳು ಸಹ ನಮ್ಮ ಪೋಷಕರಿಗೆ ಆರೋಪಿತ ದೂರುಗಳನ್ನು ಹೇಳಿ ನಿರುತ್ಸಾಹಗೊಳಿಸುತ್ತಾರೆ. ಅಂತಹ ಒತ್ತಡವನ್ನು ಎದುರಿಸಿ ಮುನ್ನಡೆಯಬೇಕಾಗುತ್ತದೆ. ಹಾಗೆಂದು ಪೋಷಕರ ಕಾಳಜಿಯನ್ನು ಧಿಕ್ಕರಿಸಲು ಆಗುವುದಿಲ್ಲ. ಅವರನ್ನು ಒಪ್ಪಿಸಿ ಅವರ ಪ್ರೋತ್ಸಾಹವನ್ನು ಪಡೆದೇ ಬಣ್ಣದ ಲೋಕವನ್ನು ಪ್ರವೇಶಿಸಿದ್ದೇನೆ. 'ಜೇನುಗೂಡು' ಆದ ಮೇಲೆ ತಕ್ಷಣ ಅವಕಾಶ ಸಿಗದೆ ಮೂರು ತಿಂಗಳು ಮನೆಯಲ್ಲೇ ನಾನು ಕೂತಿದ್ದೆ. ಒಂದು ಸೀರಿಯಲ್ ಸಿಕ್ಕ ತಕ್ಷಣ ಮುಂದೆ ನಿರಂತರವಾಗಿ ಒಂದಿಲ್ಲ ಒಂದು ಪಾತ್ರ ಸಿಗುತ್ತೆ ಎನ್ನಲು ಆಗುವುದಿಲ್ಲ. ನಟನೆಯಲ್ಲಿ ಅನಿಶ್ಚಿತತೆ ಸಾಮಾನ್ಯ. ನಂತರ ಅನೇಕ ಪಾತ್ರಗಳನ್ನು ಮಾಡಿದೆ. ಯಾವ ಪಾತ್ರ ಕೊಟ್ಟರೂ ಅದಕ್ಕೆ ಜೀವ ತುಂಬಬೇಕು. ಪಾತ್ರವೇ ನಾನಾಗಿ ಅದನ್ನು ಹೇಗೆ ತೋರಿಸುತ್ತೇನೆ ಎನ್ನುವುದು ಇಲ್ಲಿನ ಸವಾಲು.

◆ **ನಿಮ್ಮ ಪ್ರೀತಿಯ ಪಾತ್ರ ಯಾವುದು?**

ತುಂಬ ಪಾತ್ರಗಳು ಇವೆ. ಆದರೂ 'ರಾಣಿ' ಪಾತ್ರವೇ ನನಗೆ ತುಂಬ ಇಷ್ಟ. ಆರಂಭದಿಂದ ಅದನ್ನು ಅನುಭವಿಸಿದ್ದೇನೆ. ಆಕೆ ತುಂಬ ಕ್ರಿಯಾಶೀಲ ಹುಡುಗಿ. ಮನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾಳೆ. ಈಗ ಆಕೆಗೆ ಮದುವೆ ಆಗಿದೆ. ಹೊಸ ಬದುಕಿಗೆ ಮತ್ತೊಂದು ಸವಾಲು ಎದುರಾಗಿದೆ. ಆಕೆಯ ಗಂಡ ಪೆದ್ದ. ಅವರನ್ನು ಅರ್ಥ ಮಾಡಿಕೊಂಡು ಅವರನ್ನು ಮುನ್ನಡೆಸುತ್ತಾ ತನ್ನ ಜೀವನ ಮಾಡಬೇಕಿದೆ. ಇದರಲ್ಲಿ ತುಂಬ ಏರಿಳಿತಗಳಿವೆ. ಅದಕ್ಕೆ ತುಂಬ ಇಷ್ಟ.

◆ **ಸಿನಿಮಾ ನಾಯಕಿ ಆಗುವುದು ಯಾವಾಗ?**

ಸಿನಿಮಾ ಬಗ್ಗೆ ತುಂಬ ಕುತೂಹಲ ಇದೆ. 'ಜಸ್ಟ್ ಮ್ಯಾರೀಡ್' ಸಿನಿಮಾದಲ್ಲಿ ಪುಟ್ಟ ಪಾತ್ರ ಮಾಡಿದೆ. 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಬ್ಯಾಂಕ್‌ನಲ್ಲಿ ನಡೆಯುವ ಕಥೆ. ಅದು ಸೇರಿದಂತೆ ಇತ್ತೀಚಿನ 'ಎಕ್ಕ'ದಲ್ಲಿಯೂ ಚಿಕ್ಕ ಪಾತ್ರಗಳನ್ನು ಮಾಡಿದ್ದೇನೆ. ಮೂರು ಸಿನಿಮಾಗಳಲ್ಲಿ ನಾನೂ ಕಾಣಿಸಿಕೊಂಡಿದ್ದೇನೆ ಎನ್ನುವುದು ಸಮಾಧಾನವಷ್ಟೇ. ಪ್ರಧಾನ ಅವಕಾಶಕ್ಕಾಗಿ ಪ್ರಯತ್ನವಂತೂ ಮಾಡುತ್ತಿದ್ದೇನೆ.

■ **ರಾಘವೇಂದ್ರ ಕೆ.**